**ಕರ್ನಾಟಕ ಸರ್ಕಾರ**

ಸಂಖ್ಯೆ:ಗಭೂಇ/ಉನಿ(ಖ.ಆ)/ಕಗಗು/ತಿ.ನಿ-01/2022-23

ನಿರ್ದೇಶಕರ ಕಛೇರಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ
ನಂ.49 ಖನಿಜ ಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು-01, ದಿ:24-03-2023.

**ಸುತ್ತೋಲೆ**

**ವಿಷಯ:** ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023ರನ್ವಯ ಉಪಖನಿಜ ಗಣಿ ಗುತ್ತಿಗೆದಾರರಿಂದ ಹೆಚ್ಚುವರಿ ಪಾವತಿಯನ್ನು ಸಂಗ್ರಹಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ-ಎಂಎಂಎನ್/205/2022 ದಿನಾಂಕ: 17-03-2023.
2. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಗಭೂಇ/ಉನಿ(ಖ.ಆ)/ಕಗಗು/ತಿ.ನಿ-01/2022-23,/9751-9786,ದಿ:21-03-2023.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-02ರ ಈ ಕಛೇರಿ ಸುತ್ತೋಲೆಯಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023ರ ನಿಯಮ- 2(1)(a-b) ರನ್ವಯ ಕಲ್ಲುಗಣಿ ಗುತ್ತಿಗೆದಾರರು/ಕಾರ್ಯಾನುಮತಿದಾರರಿಂದ ಹೆಚ್ಚುವರಿ ಪಾವತಿ ಮೊತ್ತವನ್ನು ಸಂಗ್ರಹಿಸಲು ಸೂಚಿಸಲಾಗಿತ್ತು. ಸದರಿ ಸುತ್ತೋಲೆಯಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು -1994ರ ನಿಯಮ-3-A(a) ಮತ್ತು 3-A(b) ರಡಿ ಕಾರ್ಯಾದೇಶ ನೀಡುವ ಪ್ರಕರಣಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆಯನ್ನು ಸಂಗ್ರಹಿಸಲು ತಿಳಿಸಿದ್ದು, ಆದರೆ ಸದರಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೊತ್ತವನ್ನು ಸಂಗ್ರಹಿಸಲು ನಿಯಮಗಳಲ್ಲಿ ಉಲ್ಲೇಖವಿಲ್ಲದ ಕಾರಣ, ಸಂಗ್ರಹಿಸಲು ಕ್ರಮವಹಿಸಬಾರದೆಂದು ಈ ಮೂಲಕ ತಿಳಿಸಿದೆ.

ನಿರ್ದೇಶಕರು

**ಇವರಿಗೆ,**

1. ಹೆಚ್ಚುವರಿ ನಿರ್ದೇಶಕರು, ಉತ್ತರ ವಲಯ, ಬಳ್ಳಾರಿ ಮತ್ತು ಜಂಟಿ ನಿರ್ದೇಶಕರು, ದಕ್ಷಿಣ ವಲಯ, ಮೈಸೂರು ರವರ ಮಾಹಿತಿಗಾಗಿ.
2. ಉಪ ನಿರ್ದೇಶಕರು, ಆರ್ & ಡಿ ಮತ್ತು ನೋಡಲ್ ಅಧಿಕಾರಿ, ಇ-ಸೆಲ್, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
3. ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಗ್ರಾಮಾಂತರ/ಬೆಳಗಾವಿ/ ಚಿತ್ರದುರ್ಗ/ ವಿಜಯನಗರ/ದಕ್ಷಿಣ ಕನ್ನಡ/ ಕಲಬುರಗಿ/ ಚಾಮರಾಜನಗರ/ ಬಾಗಲಕೋಟೆ/ ರಾಮನಗರ/ ತುಮಕೂರು ಜಿಲ್ಲೆ ಇವರ ಸೂಕ್ತ ಕ್ರಮಕ್ಕಾಗಿ.
4. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ನಗರ / ಬಳ್ಳಾರಿ/ ವಿಜಯಪುರ/ ಚಿಕ್ಕಬಳ್ಳಾಪುರ/ ಕೊಡಗು/ಚಿಕ್ಕಮಗಳೂರು/ಧಾರವಾಡ/ ಹಾಸನ/ ಕೋಲಾರ / ಮಂಡ್ಯ/ ಮೈಸೂರು/ ಶಿವಮೊಗ್ಗ/ ಕೊಪ್ಪಳ/ ದಾವಣಗೆರೆ/ ಗದಗ / ಹಾವೇರಿ/ ರಾಯಚೂರು/ ಬೀದರ್/ ಯಾದಗಿರಿ/ ಉಡುಪಿ/ ಉತ್ತರ ಕನ್ನಡ ಜಿಲ್ಲೆ ಇವರ ಸೂಕ್ತ ಕ್ರಮಕ್ಕಾಗಿ.